ಕರ್ನಾಟಕ ಸರ್ಕಾರ

ನಂ. : ನಅಇ 142 ಎಂಎನ್‌ಎಕ್ಸ್ 95

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.
ದಿನಾಂಕ : 29.2.1996

**ಅಧಿಸೂಚನೆ**

ಅಧಿಸೂಚನೆ ಸಂಖ್ಯೆ : ವನಇ 142 ಎಂಎನ್‌ಎಕ್ಸ್ 95 ದಿನಾಂಕ 12.1.1996ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶವೆಂದು ಘೋಷಿಸಿ ಸದರಿ ಪ್ರದೇಶಕ್ಕೆ ಕಲವೊಂದು ಸದಸ್ಯರನ್ನೊಳಗೊಂಡಂತೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಅಧಿಸೂಚನೆಯ ಐಟಂ ನಂ. 3 ಹಾಗೂ 4 ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಪ್ರಕರಣ 4 ಸಿ (3) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1961ರ ಅಧ್ಯಾಯ 2 ರಲ್ಲಿನ ನಿಯಮ 4 ರನ್ವಯ ಸರ್ಕಾರದ ಇಚ್ಛಾನುಸಾರದ ಮೇರೆಗೆ ಅಥವಾ ಸದರಿ ಹುದ್ದೆಗಳಿಗೆ ಪದಧಾರಣೆ ಮಾಡಿದ ದಿನಾಂಕದಿಂದ 3 ವರ್ಷ ಅವಧಿಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೂಡಲೇ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರವು ಈ ಕೆಳಕಂಡವರುಗಳನ್ನು ಯೋಜನಾ ಪ್ರಾಧಿಕಾರಕ್ಕೆ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

| | | |
|---|---|---|
| 1) | ಅಧ್ಯಕ್ಷರು, ನಗರ ಸಭೆ<br>ದೇವನಹಳ್ಳಿ | ಸದಸ್ಯರು |
| 2) | ಮುಖ್ಯ ಕಾರ್ಯನಿರ್ವಹಣಾಧಿಕಾರಿ<br>ನಗರ ಸಭೆ, ದೇವನಹಳ್ಳಿ | ಸದಸ್ಯರು |
| 3) | ಕಾರ್ಯನಿರ್ವಾಹಕ ಸದಸ್ಯರು<br>ಕರ್ನಾಟಕ ಕೈಗಾರಿಕಾ ಪ್ರದೇಶ<br>ಅಭಿವೃದ್ಧಿ ಮಂಡಳಿ, ಬೆಂಗಳೂರು | ಸದಸ್ಯರು |
| 4) | ಹಿರಿಯ ವಿಮಾನ ನಿಲ್ದಾಣದ ಅಧಿಕಾರಿ<br>ಹೆಚ್.ಎ.ಎಲ್. ವಿಮಾನ ನಿಲ್ದಾಣ | ಸದಸ್ಯರು |
| 5) | ನಿರ್ದೇಶಕರು,<br>ನಗರ ಯೋಜನಾ ಇಲಾಖೆ<br>ಬೆಂಗಳೂರು | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

sd/-
(ಸಿದ್ಧರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ ವಸತಿ ಮತ್ತು
ನಗರಾಭಿವೃದ್ಧಿ ಇಲಾಖೆ